ಟ್ವೀಟು ವಾರ್



ಕಿರಣ್ ಕುಮಾರ್ @KiranKS

ಟಿಪ್ಪು ಧಾರಾವಾಹಿ ಮಾಡಿದ ಸಂಜಯ್ ಖಾನ್ ಅಪಘಾತಕ್ಕೆ ಸಿಲುಕಿ ತಮ್ಮ ವೃತಿ ನಿಲ್ಲಿಸಿದರು. ಟಿಪ್ಪು ಕತ್ತಿ ಖರೀದಿಸಿದ ವಿಜಯ್ ಮಲ್ಯ ಎಲ್ಲ ಕಳೆದುಕೊಂಡು ದೇಶ ಬಿಟ್ಟ, ಟಿಪ್ಪು ಜಯಂತಿ ಆಚರಿಸಿದ ಸಿದ್ದರಾಮಯ್ಯ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.



ಶಬ್ಬಿರ್ ಅಹ್ಮದ್ @Ahmedshabbir20

ವಿಶೇಷ ವಿಮಾನದಲ್ಲಿ ದೆಹಲಿಯ ಬಿಜೆಪಿ ನಾಯಕರು ಆಗಮಿಸುತ್ತಿದ್ದು, ಅವರು ಬರುವವರೆಗೂ ಯಾವುದೇ ಅಂತಿಮ ಚಿತ್ರಣ ಸಿಗುವುದಿಲ್ಲ. ರಾಜ್ಯಪಾಲರು ಸದ್ಯಕ್ಕೆ ಸರಕಾರ ರಚನೆಗೆ ಅವಕಾಶ ನೀಡುವುದಿಲ್ಲ. ರಾಜ್ಯದಲ್ಲಿ ನಾಟಕ ಮುಂದುವರಿಯಲಿದೆ.



ಜೈವೀರ್ ಸೆರ್ಗಿಲ್ @JaiveerShergill

ಗೋವಾದಲ್ಲಿ ಬಿಜೆಪಿ ನಿರ್ಧಾರವನ್ನು ಚಾಣಕ್ಯ ನೀತಿ ಎಂದು ಬಣ್ಣಿಸಿದ್ದ ಮಾಧ್ಯಮಗಳು ಈಗ ಕರ್ನಾಟಕದಲ್ಲಿ ಕಾಂಗ್ರೆಸ್– ಜೆಡಿಎಸ್ ನಿರ್ಧಾರವನ್ನು ಅವಕಾಶವಾದ ಎನ್ನುತ್ತಿವೆ. ಇವರಿಗೆ ಬರ್ನಾಲ್‌ನಿಂದ ಮಾತ್ರ ಪರಿಹಾರ ಸಿಗಲಿದೆ.

## ಈಶ್ವರಪ್ಪ



ಶಿವಮೊಗ್ಗ ನಗರ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಕೆ.ಬಿ. ಪ್ರಸನ್ನಕುಮಾರ್ ವಿರುದ್ಧ 1,04,027 ಮತಗಳನ್ನು ಪಡೆದು 46,107 ಮತಗಳ ಅಂತರದಿಂದ ಗೆಲುವಿನ ನಗೆ ಬೀರಿದ್ದು, ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಅಭ್ಯರ್ಥಿ 57,920 ಮತ ಪಡೆದು ಸೋಲನುಭವಿಸಿದ್ದಾರೆ. ಜೆಡಿಎಸ್ ಅಭ್ಯರ್ಥಿ ಎಚ್.ಎನ್. ನಿರಂಜನ್ 5796 ಮತ ಪಡೆದು ಮೂರನೆ ಸ್ಥಾನ ಪಡೆದಿದ್ದಾರೆ.

## 90

ವಿಜಯಪುರದ ದೇವರ ಹಿಪ್ಪರಿಗೆ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸೋಮನಗೌಡ ಪಾಟೀಲ 38,802 ಮತಗಳನ್ನು ಪಡೆದಿದ್ದಾರೆ. ಅವರು ಕೇವಲ ಪ್ರತಿಸ್ಪರ್ಧಿ ಜೆಡಿಎಸ್‌ನ ಭೀಮನಗೌಡ ವಿರುದ್ಧ 90 ಮತಗಳಿಂದ ವಿಜಯಪತಾಕೆ ಹಾರಿಸಿದ್ದಾರೆ. ಜೆಡಿಎಸ್ ಅಭ್ಯರ್ಥಿ 38,712 ಮತಗಳನ್ನು ಪಡೆದಿದ್ದಾರೆ.

ಬಿಜೆಪಿಗಿಂತ ಕಾಂಗ್ರೆಸ್ ಜತೆ ಮೈತ್ರಿ ಸೇಫ್ ಎಂಬ ತೀರ್ಮಾನ | ಸಿದ್ಧಾಂತವೂ ಉಳಿಯಲಿ, ಪಕ್ಷವೂ ಉಳಿಯಲಿ ಎಂಬ ಮುಂಜಾಗ್ರತೆ

# ದೇವೇಗೌಡರು ಕಾಂಗ್ರೆಸ್ ಸಖ್ಯವನ್ನೇ ಒಪ್ಪಿದ್ದೇಕೆ?

**ವೆಂಕಟೇಶ ಆರ್.ದಾಸ್** ಬೆಂಗಳೂರು



ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತ ಸಿಗದ ಹಿನ್ನೆಲೆಯಲ್ಲಿ ರಾಜ್ಯ ರಾಜಕಾರಣದಲ್ಲಿ ಹೈಡ್ರಾಮ ಶುರುವಾಗಿದ್ದು, ಜೆಡಿಎಸ್ ಪಕ್ಷವು ಕಾಂಗ್ರೆಸ್ ಜತೆಗಿನ ಮೈತ್ರಿ ಮಾಡಿಕೊಳ್ಳಲು ಒಪ್ಪಿಗೆ ನೀಡಿದೆ. ಕಾಂಗ್ರೆಸ್ ಜತೆಗೆ ಮೈತ್ರಿಗೆ ಮುಂದಾಗಿರುವ ಜೆಡಿಎಸ್ ಮುಂದೆ ಅಧಿಕಾರವನ್ನು ಮೀರಿದ ಅನೇಕ ಲೆಕ್ಕಾಚಾರಗಳಿದ್ದು, ರಾಜಕೀಯ ಚಾಣಕ್ಯ ದೇವೇಗೌಡ ತಂತ್ರಗಾರಿಕೆ ಇಲ್ಲಿ ಕಾಣುತ್ತಿದೆ.

ಜೆಡಿಎಸ್ ವರಿಷ್ಠರು ಕಾಂಗ್ರೆಸ್ ಜತೆಗೆ ಅಧಿಕಾರ ಹಂಚಿಕೆಗೆ ಮುಂದಾಗಿರಲು ಮುಖ್ಯ ಕಾರಣ ಕಾಂಗ್ರೆಸ್, ದೇಶದಲ್ಲಿ ದುರ್ಬಲ ಸ್ಥಿತಿಯಲ್ಲಿರುವುದು, ಕಾಂಗ್ರೆಸ ಜತೆಗಿನ ಅಧಿಕಾರ ಹಂಚಿಕೆಯಿಂದ ಜೆಡಿಎಸ್‌ಗೆ ಯಾವುದೇ ಅಪಾಯವಿಲ್ಲ. ಒಂದು ವೇಳೆ ಬಿಜೆಪಿ ಜತೆ ಕೈಜೋಡಿಸಿದರೆ, ಮುಂದೆ ತಮ್ಮ ಪಕ್ಷವನ್ನೇ ಒಡೆಯುವ ಆಲೋಚನೆ ಬಿಜೆಪಿ ನಾಯಕರಲ್ಲಿ ಬರಬಹುದು. ಅಧಿಕಾರದ ರುಚಿಕಂಡ ಪಕ್ಷದ ಶಾಸಕರು ಬಿಜೆಪಿಯ ಆಮಿಷಕ್ಕೆ ಒಳಗಾಗುವ ಭೀತಿ ಎದುರಾಗಬಹುದು.

ಈಗಾಗಲೇ, ಬಿಜೆಪಿಯ ರಾಷ್ಟ್ರೀಯ ನಾಯಕರ ಮಟ್ಟದಲ್ಲಿ ಜೆಡಿಎಸ್ ಪಕ್ಷವನ್ನು ಕೊನೆಗಾಣಿಸುವ ಕುರಿತು ಆಂತರಿಕ ಚರ್ಚೆ ನಡೆದಿದೆ ಎಂಬ ಮಾತುಗಳು ಕೇಳಿಬಂದಿವೆ. ಈ ಸ್ಥಿತಿಯಲ್ಲಿ ಬಿಜೆಪಿ ಜತೆಗೆ ಜೈಜೋಡಿಸಿದರೆ ಮುಂದೆ ಪಕ್ಷಕ್ಕೆ ಅಪಾಯವಾಗಬಹುದು ಎಂಬ ಮುಂದಾಲೋಚನೆಯಿಂದ ದೇವೇಗೌಡರು ಎಚ್ಚರಿಕೆಯ ಹೆಜ್ಜೆಯನ್ನಿಟ್ಟಿದ್ದಾರೆ. ಜತೆಗೆ, ಕಾಂಗ್ರೆಸ್ ಈಗಾಗಲೇ ದೇಶದ 22ಕ್ಕೂ ಅಧಿಕ ರಾಜ್ಯಗಳಲ್ಲಿ ಅಧಿಕಾರ ಕಳೆದುಕೊಂಡಿದ್ದು, ಅಸ್ತಿತ್ವ ಉಳಿಸಿಕೊಳ್ಳುವ ಕಾರಣಕ್ಕೆ ಒದ್ದಾಡುತ್ತಿದೆ. ಆದ್ದರಿಂದ ಬಿಜೆಪಿಗಿಂತ ಕಾಂಗ್ರೆಸ್ ಜತೆಗೆ ಗುರುತಿಸಿಕೊಳ್ಳುವುದು ಅಪಾಯದ ಸಾಧ್ಯತೆ ಕಡಿಮೆ ಮಾಡಲಿದೆ. ಹೀಗಾಗಿ, ಕಾಂಗ್ರೆಸ್ ಸೂಕ್ತ ಆಯ್ಕೆ ಎಂಬ ತೀರ್ಮಾನಕ್ಕೆ ಬರಲಾಗಿದೆ.

**ಒಂದೇ ಕಲ್ಲಲ್ಲಿ ಮೂರಾರು ಹಕ್ಕಿ:** ದೇವೇಗೌಡರು ಒಂದೇ ಕಲ್ಲಿನಲ್ಲಿ ಮೂರು ಹಕ್ಕಿ ಒಡೆಯುವ ಕಲೆಯನ್ನು ಕರಗತ ಮಾಡಿಕೊಂಡವರು. ಅವರು ತೆಗೆದುಕೊಳ್ಳುವ ಯಾವುದೇ ತೀರ್ಮಾನದ ಹಿಂದೆ ಒಂದಕ್ಕಿಂತ ಹೆಚ್ಚು ಒಳಿತನ್ನು ಕಾಣುವ ಆಶಯ ಇದ್ದೇ ಇರುತ್ತದೆ. ಕಾಂಗ್ರೆಸ್ ಜತೆಗೆ ಮೈತ್ರಿ ಮಾಡಿಕೊಂಡರೆ ಮುಂದಿನ ಲೋಕಸಭಾ ಚುನಾವಣೆ ಸಂದರ್ಭದ ತೃತೀಯ ರಂಗದ ಕನಸು ಕಾಣಲು ಸುಲಭವಾಗುತ್ತದೆ. ಈಗಾಗಲೇ, ದೇಶದ ವಿವಿಧ ರಾಜ್ಯದ ಬಹುತೇಕ ನಾಯಕರು ಬಿಜೆಪಿಯೇತರ ಸರಕಾರದ ಬಗ್ಗೆ ಪ್ರಸ್ತಾವನೆ ಮಾಡಿದ್ದಾರೆ. ಇದರಿಂದ ಕಾಂಗ್ರೆಸ್ ಜತೆಗೆ ಗುರುತಿಸಿಕೊಳ್ಳುವುದು ಸೂಕ್ತ ತೀರ್ಮಾನವಾಗಲಿದೆ. ಮುಂದೆ ಕೇಂದ್ರದಲ್ಲಿ ಒಂದು ವೇಳೆ ತೃತೀಯ ರಂಗ ಅಧಿಕಾರಕ್ಕೆ ಬಂದರೆ ಅಲ್ಲಿ ತಮ್ಮ ಪಕ್ಷಕ್ಕೊಂದು ಸಾಧ್ಯತೆ ತೆರೆದುಕೊಳ್ಳುವಂತೆ ಮಾಡಲಿದೆ. ಆದ್ದರಿಂದಲೇ ಗೌಡರು ಕಾಂಗ್ರೆಸ್ ಜತೆಗೆ ಹೋಗಲು ತೀರ್ಮಾನಿಸಿದ್ದಾರೆ.

**ಡಿಕೆಶಿ ಸಾರಥ್ಯ:** ಪರಸ್ಪರ ರಾಜಕೀಯ ಎದುರಾಳಿಗಳು ಎನಿಸಿಕೊಂಡಿದ್ದ ಡಿ.ಕೆ ಶಿವಕುಮಾರ್ ಮತ್ತು ಎಚ್.ಡಿ ಕುಮಾರಸ್ವಾಮಿ ಸರಕಾರ ರಚನೆ ಸಂಬಂಧ ದೋಸ್ತಿಗಳಾಗಿದ್ದಾರೆ. ಕಾಂಗ್ರೆಸ್ ನೇತೃತ್ವದಲ್ಲಿ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಲು ಡಿ.ಕೆ ಶಿವಕುಮಾರ್ ಸಾರಥ್ಯ ವಹಿಸಿ ಕೊಂಡಿ ದ್ದಾರೆ. ಪಕ್ಷೇತರ ಮತ್ತು ಕಾಂಗ್ರೆಸ್ ಶಾಸಕರನ್ನು ಹಿಡಿದಿಟ್ಟುಕೊಳ್ಳುವ ಹೊಣೆಯನ್ನು ಡಿಕೆಶಿ ಹೊತ್ತಿದ್ದಾರೆ. ಸ್ವತಃ ಕುಮಾರಸ್ವಾಮಿ ಅವರ ಜತೆಗೆ ರಾಜ್ಯಪಾಲರ ಬಳಿ ತೆರಳಿ ಸರಕಾರ ರಚನೆ ಅವಕಾಶ ನೀಡುವಂತೆ ಕೋರಿದ್ದಾರೆ. 2023ರ ಚುನಾವಣೆ ಮೇಲೆ ಕಣ್ಣಿಟ್ಟಿರುವ ಡಿಕೇಶಿ ಅವರಿಗೆ ಈ ಬಾರಿ ತಮಗೆ ಮುಖ್ಯಮಂತ್ರಿ ಸ್ಥಾನ ಸಿಗದು ಎಂಬ ಸತ್ಯ ಅರಿತಿದ್ದಾರೆ. ಹೀಗಾಗಿ, ಜೆಡಿಎಸ್‌ನೊಂದಿಗೆ ಅಧಿಕಾರ ಉಳಿಸಿಕೊಂಡು ಮುಂದಿನ ಚುನಾವಣೆ ವೇಳೆ ತಮ್ಮ ಆಸೆ ಪೂರೈಸಿಕೊಳ್ಳುವ ಇರಾದೆಯಿಂದ ಸರಕಾರ ರಚನೆ ಸಾರಥ್ಯ ವಹಿಸಿಕೊಂಡಿದ್ದಾರೆ.

**ಜ್ಯಾತ್ಯತೀತತೆ ಮಂತ್ರ!** : ಕಾಂಗ್ರೆಸ್‌ನೊಂದಿಗೆ ಮೈತ್ರಿಗೆ ಮುಂದಾಗಿರುವ ದೇವೇಗೌಡರು 'ಜ್ಯಾತ್ಯತೀತ ಶಕ್ತಿಗಳು ಒಂದಾಗಬೇಕು' ಎಂಬ ಕಾರಣದಿಂದ ಕಾಂಗ್ರೆಸ್ ಜತೆಗೆ ಮೈತ್ರಿ ಮಾಡಿಕೊಳ್ಳುವುದಾಗಿ ಹೇಳಿದ್ದಾರೆ. ಬಿಜೆಪಿ ಜತೆಗೆ ಗುರುತಿಸಿಕೊಂಡರೆ, ಮುಸ್ಲಿಂ ಸೇರಿ ಅಲ್ಪಸಂಖ್ಯಾತ ಮತ ಕೈಬಿಟ್ಟು ಹೋಗಬಹುದು ಎಂಬ ಅಪಾಯವಿದೆ. ಕೋಮುವಾದಿ ಎಂಬಂತೆ ಬಿಂಬಿಸಿಕೊಳ್ಳುವ ಬಿಜೆಪಿ ಜತೆಗೆ ನಾವು ಹೋಗಲಿಲ್ಲ ಎನ್ನುವ ಮೂಲಕ ಅಲ್ಪಸಂಖ್ಯಾತರಿಗೆ ಹಾಗೂ ಸಂವಿಧಾನ ಬದಲಾವಣೆ ಮತ್ತು ಮೀಸಲು ರದ್ದುಮಾಡುವ ಮಾತುಗಳನ್ನಾಡುವ ಬಿಜೆಪಿ ಜತೆಗೆ ಕೈಜೋಡಿಸಲಿಲ್ಲ ಎನ್ನುವ ಮೂಲಕ ದಲಿತರಿಗೆ ಸಂದೇಶ ನೀಡುವ ನಿಟ್ಟಿನಲ್ಲಿ ದೇವೇಗೌಡರು ಎಚ್ಚರಿಕೆ ಹೆಜ್ಜೆಯನ್ನಿಟ್ಟಿದ್ದಾರೆ.

### ಸತ್ಯವಾದ ಕೆಲ ಸಂಗತಿ

#### ಈ ಬಾರಿ ಒಕ್ಕಲಿಗರ ಸರಕಾರ

ಒಕ್ಕಲಿಗರ ಸಂಘದ ಕಾರ್ಯಕ್ರಮವೊಂದರಲ್ಲಿ ಆದಿಚುಂಚನಗಿರಿ ಪೀಠಾಧ್ಯಕ್ಷರ ಸಮ್ಮುಖದಲ್ಲಿ ಭಾಗವಹಿಸಿದ್ದ ಮೂರು ಪಕ್ಷದ ಒಕ್ಕಲಿಗರ ಮುಖಂಡರು 'ಈ ಬಾರಿ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಒಕ್ಕಲಿಗರು ಮುಖ್ಯಮಂತ್ರಿಯಾಗುವುದು ಖಚಿತ ಎಂಬ ವಿಶ್ವಾಸದ ಮಾತುಗಳನ್ನಾಡಿದ್ದರು. ಈ ಮಾತು ನಿಜವಾಗುವ ಎಲ್ಲ ಲಕ್ಷಣಗಳು ಕಾಣಿಸುತ್ತಿವೆ. ಈ ವೇದಿಕೆಯಲ್ಲಿ ಜೆಡಿಎಸ್ ವರಿಷ್ಠ ದೇವೇಗೌಡ, ಕಾಂಗ್ರೆಸ್‌ನ ಡಿ.ಕೆ ಶಿವಕುಮಾರ್ ಹಾಗೂ ಬಿಜೆಪಿಯ ಆರ್. ಅಶೋಕ್ ವೇದಿಕೆಯಲ್ಲಿದ್ದರು. ಈ ಮಾತಿಗೆ ಮೂವರು ಸಮ್ಮತಿಸಿದ್ದರು. ಇದು ನಿಜವಾಗುವುದು ನಿಚ್ಚಳವಾಗಿದೆ. ಇದಕ್ಕೆ ಬಹುತೇಕ ಎಲ್ಲ ಒಕ್ಕಲಿಗ ನಾಯಕರ ಒಪ್ಪಿಗೆಯೂ ಪರೋಕ್ಷವಾಗಿ ಇದ್ದಂತೆ ಕಾಣುತ್ತಿದೆ.

#### ದಲಿತ ಡಿಸಿಎಂ ಭರವಸೆ

ಬಿಎಸ್‌ಪಿ ಜತೆಗೆ ಮೈತ್ರಿ ಮಾಡಿಕೊಂಡ ಭರದಲ್ಲಿ ಹಾಗೂ ದಲಿತರನ್ನು ಪಕ್ಷದೆಡೆಗೆ ಸೆಳೆಯುವ ಉತ್ಸಾಹದಲ್ಲಿ ಪಕ್ಷ ಅಧಿಕಾರಕ್ಕೆ ಬಂದರೆ ದಲಿತರಿಗೆ ಉಪಮುಖ್ಯಮಂತ್ರಿ ಹುದ್ದೆ ನೀಡುವುದಾಗಿ ಜೆಡಿಎಸ್ ರಾಜ್ಯಾಧ್ಯಕ್ಷ ಕುಮಾರಸ್ವಾಮಿ ಭರವಸೆ ನೀಡಿದ್ದರು. ಇದೀಗ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವಿನ ಮೈತ್ರಿ ಅಸ್ತಿತ್ವಕ್ಕೆ ಬಂದರೆ, ಜೆಡಿಎಸ್‌ಗೆ ಮುಖ್ಯಮಂತ್ರಿ ಹುದ್ದೆ ನೀಡಲು ಒಪ್ಪಿಗೆ ನೀಡಲಾಗಿದೆ. ಆದ್ದರಿಂದ ಕೆಪಿಸಿಸಿ ಅಧ್ಯಕ್ಷ ಡಾ. ಜಿ. ಪರಮೇಶ್ವರ ಅವರು ಉಪಮುಖ್ಯಮಂತ್ರಿಯಾಗುವ ಎಲ್ಲ ಲಕ್ಷಣಗಳಿವೆ. ಇದು ಕಾರ್ಯರೂಪಕ್ಕೆ ಬಂದರೆ ಕುಮಾರಸ್ವಾಮಿ ಅವರ ಭರವಸೆ ಈಡೇರಿದಂತೆಯೂ ಆಗಲಿದೆ. ಜತೆಗೆ, ಕಾಂಗ್ರೆಸ್ ದಲಿತರನ್ನು ಕಡೆಗಣಿಸಿದೆ ಎಂಬ ಮಾತಿಂದ ದೂರವಾಗುತ್ತಿದ್ದ ದಲಿತರು ಕಾಂಗ್ರೆಸ್ ಅಥವಾ ಜೆಡಿಎಸ್ ಕಡೆಗೆ ಸೆಳೆಯಲು ಅನುಕೂಲವಾಗಲಿದೆ. ಒಟ್ಟಾರೆ, ಅನಿರೀಕ್ಷಿತವಾಗಿ ನೀಡಿದ ಹೇಳಿಕೆಯೊಂದು ನಿಜವಾಗುವ ಎಲ್ಲ ಲಕ್ಷಣಗಳೂ ಇವೆ.

ಸೋಮವಾರ ರಾತ್ರಿಯೇ ಎಚ್‌ಡಿಡಿ ಜತೆ ಕೈ ವರಿಷ್ಠರ ಮಾತು

# ಫಲಿತಾಂಶದ ಮೊದಲೇ ಸಜ್ಜಾಗಿತ್ತು ಪ್ಲಾನ್!

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು



ವಿಧಾನಸಭಾ ಚುನಾವಣೆಯಲ್ಲಿ ಅತಂತ್ರ ಸ್ಥಿತಿ ನಿರ್ಮಾಣವಾಗುವುದು ಖಚಿತವಾಗುತ್ತಿದ್ದಂತೆ, ಕಾಂಗ್ರೆಸ್ ಹೈಕಮಾಂಡ್ ಜೆಡಿಎಸ್ ವರಿಷ್ಠ ದೇವೇಗೌಡರೊಂದಿಗೆ ಫಲಿತಾಂಶ ಬರುವ ಮೊದಲೇ ಒಂದು ಹಂತದ ಚರ್ಚೆ ನಡೆಸಿದರೆ, ಬಿಜೆಪಿ ಬಹುಮತದ ವಿಶ್ವಾಸದಲ್ಲಿ ಮೈಮರೆತು ಬಳಿಕ ಪಶ್ಚಾತಾಪ ಪಡುವಂತಾಗಿದೆ.

ಸೋಮವಾರ ತಡರಾತ್ರಿ ಜೆಡಿಎಸ್ ವರಿಷ್ಠ ದೇವೇಗೌಡರೊಂದಿಗೆ, ಕಾಂಗ್ರೆಸ್ ಹಿರಿಯ ನಾಯಕ ಗುಲಾಂ ನಬಿ ಆಜಾದ್ ಚರ್ಚಿಸಿದ್ದು, ಅತಂತ್ರ ಪರಿಸ್ಥಿತಿ ನಿರ್ಮಾಣವಾದರೆ, ಸರಕಾರ ಯಾವ ರೀತಿ ರಚಿಸಬೇಕೆನ್ನುವ ಬಗ್ಗೆ ಚರ್ಚಿಸಿದ್ದಾರೆ. ಯಾವುದೇ ಕಾರಣಕ್ಕೂ ಬಿಜೆಪಿ ಅಧಿಕಾರದ ಗದ್ದುಗೆ ಏರಲು ಬಿಡಬಾರದು ಎಂದು ನಿರ್ಧರಿಸಿದ ಕಾಂಗ್ರೆಸ್ ಹೈಕಮಾಂಡ್ ಕುಮಾರಸ್ವಾಮಿ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಲು ಒಪ್ಪಿಗೆ ಸೂಚಿಸಿತ್ತು ಎಂದು ತಿಳಿದುಬಂದಿದೆ.

ಚುನಾವಣಾ ಸಮೀಕ್ಷೆಗಳು ಅತಂತ್ರ ಫಲಿತಾಂಶದ ಬಗ್ಗೆ ಲೆಕ್ಕ ಹಾಕಿದ್ದ ಕಾಂಗ್ರೆಸ್, ಜೆಡಿಎಸ್ ಜತೆ ಮೈತ್ರಿ ಮಾಡಿಕೊಳ್ಳುವ ಜವಾಬ್ದಾರಿಯನ್ನು ಗುಲಾಂ ನಬಿ ಆಜಾದ್, ಕೆ.ಸಿ ವೇಣುಗೋಪಾಲ್ ಹೆಗಲಿಗೆ ಹೈಕಮಾಂಡ್ ಹಾಕಿತ್ತು. ಎಚ್.ಡಿ ಕುಮಾರಸ್ವಾಮಿ ಸಿಂಗಾಪುರಕ್ಕೆ ತೆರಳಿದ್ದ ಹಿನ್ನೆಲೆಯಲ್ಲಿ ದೇವೇಗೌಡರೊಂದಿಗೆ ಚರ್ಚಿಸಿ, ಕಾಂಗ್ರೆಸ್‌ನೊಂದಿಗೆ ಸಮಿಶ್ರ ಸರಕಾರ ರಚಿಸಲು ಒಪ್ಪಿಗೆ ನೀಡುವಂತೆ ಮನವಿ ಮಾಡಿದ್ದಾರೆ. ಆದರೆ, ದೇವೇಗೌಡರು ಮುಖ್ಯಮಂತ್ರಿ ಸ್ಥಾನ ಹಾಗೂ ಕೆಲ ಪ್ರಮುಖ ಖಾತೆಗಳನ್ನು ನೀಡಿದರೆ ಮಾತ್ರ ಮೈತ್ರಿ ಮಾಡಿಕೊಳ್ಳಲು ಒಪ್ಪುವುದಾಗಿ ಹೇಳಿದ್ದರು ಎಂದು ತಿಳಿದುಬಂದಿದೆ.

ಬುಧವಾರ ಬೆಳಗ್ಗೆ ಫಲಿತಾಂಶದ ಟ್ರೆಂಡ್ ನೋಡುತ್ತಿದ್ದಂತೆ ಜೆಡಿಎಸ್ ಆಫರ್ ಒಪ್ಪಿಕೊಂಡಿರುವ ಕಾಂಗ್ರೆಸ್ ಹೈಕಮಾಂಡ್, ಜೆಡಿಎಸ್‌ಗೆ ಮುಖ್ಯಮಂತ್ರಿ ಸ್ಥಾನ ಹಾಗೂ ಕಾಂಗ್ರೆಸ್‌ಗೆ ಉಪಮುಖ್ಯಮಂತ್ರಿ ಸ್ಥಾನ ಹಂಚಿಕೊಂಡು ಸರಕಾರ ರಚಿಸಲು ರಾಜಭವನದತ್ತ ಹೆಜ್ಜೆ ಹಾಕಿದ್ದಾರೆ.

**ಎಡವಟ್ಟು ಮಾಡಿಕೊಂಡ ಬಿಜೆಪಿ:** ಫಲಿತಾಂಶದಲ್ಲಿ ಬಿಜೆಪಿ ಬಹುಮತದತ್ತ ಮುನ್ನಡೆ ಕಾಯ್ದುಕೊಳ್ಳುತ್ತಿದ್ದಂತೆ, ಬಿಜೆಪಿ ನಾಯಕರು ಕಾಂಗ್ರೆಸ್–ಜೆಡಿಎಸ್ ಮೈತ್ರಿಯ ಸಾಧ್ಯತೆ ಬಗ್ಗೆ ಹೆಚ್ಚು ಗಮನ ಹರಿಸದೇ, ಕೇವಲ ತಮ್ಮ ಬಹುಮತದತ್ತ ಚಿತ್ತ ಹರಿಸಿದರು. ಆದರೆ, ಕಾಂಗ್ರೆಸ್ ಬಹುಮತ ಪಡೆಯದಿದ್ದರೂ, ಸರಕಾರ ರಚಿಸಲು ಇದ್ದ ಸಾಧ್ಯತೆಗಳ ಬಗ್ಗೆ ಚರ್ಚಿಸಿ ಸ್ವತಃ ಸೋನಿಯಾ ಗಾಂಧಿ ಅವರಿಂದ ದೇವೇಗೌಡರಿಗೆ ಕರೆ ಮಾಡಿ ಮೈತ್ರಿ ವಿಚಾರ ಪ್ರಸ್ತಾಪಿಸಿದ್ದಾರೆ.

2015ರಲ್ಲಿ ನಡೆದ ಬಿಬಿಎಂಪಿ ಚುನಾವಣೆಯಲ್ಲಿಯೂ, ಬಿಜೆಪಿ ಅತಿ ದೊಡ್ಡ ಪಕ್ಷವಾಗಿ ಬಂದಿದ್ದರೂ, ಜೆಡಿಎಸ್ ಜತೆ ಮಾತನಾಡದೇ ಹೋಗಿದ್ದರಿಂದ, ಬಿಬಿಎಂಪಿ ಅಧಿಕಾರಕ್ಕೆ ಬರಲು ಸಾಧ್ಯವಾಗಿರಲಿಲ್ಲ. ಅಂದು ಬಿಬಿಎಂಪಿ ಚುನಾವಣಾ ಉಸ್ತುವಾರಿ ವಹಿಸಿಕೊಂಡಿದ್ದ ಆಶೋಕ್ ಎಡವಟ್ಟು ಮಾಡಿಕೊಂಡರೆ, ವಿಧಾನಸಭಾ ಚುನಾವಣೆಯಲ್ಲಿ ಯಡಿಯೂರಪ್ಪ ಸೇರಿದಂತೆ ಬಹುತೇಕ ನಾಯಕರು ಎಡವಿದ್ದಾರೆ.

ಮುಖ್ಯಮಂತ್ರಿ ಸ್ಥಾನದ ಆಫರ್ ನೀಡುತ್ತಿದ್ದಂತೆ ದೇವೇಗೌಡರು, ಕುಮಾರಸ್ವಾಮಿ ಅವರೊಂದಿಗೆ ಚರ್ಚಿಸಿ ಮೈತ್ರಿ ಪ್ರಸ್ತಾಪಕ್ಕೆ ಒಪ್ಪಿಗೆ ಸೂಚಿಸಿದ್ದಾರೆ. ಜೆಡಿಎಸ್–ಕಾಂಗ್ರೆಸ್ ಮೈತ್ರಿ ಅಂತಿಮ ಹಂತ ತಲುಪುವ ವೇಳೆಗೆ ಬಿಜೆಪಿ ಜೆಡಿಎಸ್ ಬಾಗಿಲು ತಟ್ಟಿದರೂ, ಪ್ರಯೋಜನವಾಗಿಲ್ಲ.

ಕಳೆದ ಬಾರಿಯ ಸನ್ನಿವೇಶವನ್ನೇ ತಂದಿಟ್ಟ ದಳಪತಿಗಳು

# ಮಂಡ್ಯ, ರಾಮನಗರದಲ್ಲಿ ಉಪ ಚುನಾವಣೆ

**ಮತ್ತೀಕೆರೆ ಜಯರಾಮ್** ಮಂಡ್ಯ / ರಾಮನಗರ

ಕಳೆದ ಬಾರಿಯಂತೆಯೇ ಈ ಬಾರಿಯ ಚುನಾವಣೆಯಿಂದಲೇ ಆಸುಪಾಸಿನ ಮಂಡ್ಯ ಮತ್ತು ರಾಮನಗರ ಜಿಲ್ಲೆಯಲ್ಲಿ ತಲಾ ಒಂದು ಉಪ ಚುನಾವಣೆ ಎದುರಾಗಿದೆ.

ಮೇಲುಕೋಟೆ ಕ್ಷೇತ್ರದಲ್ಲಿ ಗೆಲುವು ಸಾಧಿಸಿರುವ ಸಿ.ಎಸ್.ಪುಟ್ಟರಾಜು ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ರಾಜೀನಾಮೆ ಸಲ್ಲಿಸಲು ನಿರ್ಧರಿಸಿದ್ದು, ಲೋಕಸಭೆಗೆ ಉಪ ಚುನಾವಣೆ ನಿಶ್ಚಿತ.

ಅಂತೆಯೇ ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಚನ್ನಪಟ್ಟಣ ಮತ್ತು ರಾಮನಗರ ಉಭಯ ಕ್ಷೇತ್ರಗಳಲ್ಲೂ ಗೆಲುವು ಸಾಧಿಸಿದ್ದಾರೆ. ಅವರು ಯಾವುದಾದರೊಂದು ಕ್ಷೇತ್ರಕ್ಕೆ ರಾಜೀನಾಮೆ ಸಲ್ಲಿಸಲಿದ್ದು, ಮತ್ತೊಂದು ಉಪ ಚುನಾವಣೆ ತಂದೊಡ್ಡಿದ್ದಾರೆ. 2013ರ ವಿಧಾನಸಭೆ ಚುನಾವಣೆ ನಡೆದಾಗಲೂ ಜೆಡಿಎಸ್‌ನಿಂದ ಸಂಸದರಾಗಿದ್ದ ಎಚ್.ಡಿ. ಕುಮಾರಸ್ವಾಮಿ ಮತ್ತು ಎನ್.ಚಲುವರಾಯಸ್ವಾಮಿ ಇಬ್ಬರೂ ವಿಧಾನಸಭೆಗೆ ಆಯ್ಕೆಯಾಗಿದ್ದರು. ಲೋಕಸಭೆ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದ್ದರು.

ಕುಮಾರಸ್ವಾಮಿ ರಾಜೀನಾಮೆಯಿಂದ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರಕ್ಕೆ ಮತ್ತು ಚಲುವರಾಯಸ್ವಾಮಿ ರಾಜೀನಾಮೆಯಿಂದ ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ಉಪ ಚುನಾವಣೆ ನಡೆದಿತ್ತು. ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಸಹೋದರ ಡಿ.ಕೆ.ಸುರೇಶ್ ಅವರನ್ನು ಗೆಲ್ಲಿಸಿಕೊಳ್ಳುವ ಮೂಲಕ ಡಿ.ಕೆ.ಶಿವಕುಮಾರ್ ಅವರು ಸಿದ್ದರಾಮಯ್ಯ ಸಂಪುಟಕ್ಕೆ ಪ್ರವೇಶ ಪಡೆದುಕೊಂಡರು.

ಅಂತೆಯೇ ಮಂಡ್ಯದಲ್ಲಿ ಅನಿರೀಕ್ಷಿತ ಮತ್ತು ಅಚ್ಚರಿ ಬೆಳವಣಿಗೆಯಲ್ಲಿ ಚುನಾವಣಾ ಅಖಾಡಕ್ಕೆ ಧುಮುಕಿದ ನಟಿ ರಮ್ಯಾ ಗೆಲುವು ಸಾಧಿಸಿದ್ದರು. ಸಾರ್ವತ್ರಿಕ ಚುನಾವಣೆಯಲ್ಲಿ ಸುರೇಶ್ ಪುನರಾವರ್ತನೆ ಆದರೆ, ರಮ್ಯಾ ಸೋಲು ಕಂಡರು.

### ರಾಮನಗರಕ್ಕೆ ಎಚ್‌ಡಿಕೆ ರಾಜೀನಾಮೆ

ಉಭಯ ಕಡೆ ಗೆಲುವು ಸಾಧಿಸಿರುವ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಸತತ ನಾಲ್ಕನೇ ಬಾರಿ ತಮ್ಮನ್ನು ಗೆಲ್ಲಿಸಿರುವ ರಾಮನಗರಕ್ಕೆ ರಾಜೀನಾಮೆ ಸಲ್ಲಿಸಿ, ಚೊಚ್ಚಲ ಗೆಲುವು ಕಂಡಿರುವ ಚನ್ನಪಟ್ಟಣವನ್ನೇ ಉಳಿಸಿಕೊಳ್ಳುವ ಸಾಧ್ಯತೆಯಿದೆ ಎನ್ನುವ ಮಾತು ಜೆಡಿಎಸ್ ಪಾಳಯದಲ್ಲಿ ಹರಿದಾಡುತ್ತಿದೆ.

## ಮೈತ್ರಿಮಾತು

# ತೊಡೆ ತಟ್ಟಿದವರ ತೊಡೆಯನ್ನೇ ಮುರಿದ ದೊಡ್ಡಗೌಡರು!

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ವಿರುದ್ಧ ತೊಡೆತಟ್ಟಿದ್ದ ಬಂಡಾಯ ಶಾಸಕರಲ್ಲಿ ಬಹುತೇಕರನ್ನು ಮನೆಗೆ ಕಳುಹಿಸುವಲ್ಲಿ ರಾಜಕೀಯ ಧುರೀಣ ಯಶಸ್ವಿಯಾಗಿದ್ದಾರೆ. ಹಳೆ ಮೈಸೂರು ಭಾಗದ ಮೂವರು ಶಾಸಕರು ಹಾಗೂ ಉತ್ತರ ಕರ್ನಾಟಕದ ಇಬ್ಬರು ಶಾಸಕರು ಸೋತು ಮನೆ ಸೇರಿದ್ದಾರೆ.



ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪರವಾಗಿ ಮತ ಚಲಾಯಿಸಿದ ಏಳು ಶಾಸಕರು ಜೆಡಿಎಸ್ ವಿರುದ್ಧ ಸೆಡ್ಡು ಹೊಡೆದಿದ್ದರು. ಕಾಂಗ್ರೆಸ್‌ನಿಂದ ಟಿಕೆಟ್ ಪಡೆದು ಜೆಡಿಎಸ್ ವಿರುದ್ಧ ತೊಡೆ ತಟ್ಟಿದ್ದ ಏಳು ಶಾಸಕರ ಪೈಕಿ ಚಾಮರಾಜಪೇಟೆಯ ಜಮೀರ್ ಅಹಮದ್ ಮತ್ತು ಪುಲಿಕೇಶಿನಗರದ ಅಖಂಡ ಶ್ರೀನಿವಾಸ ಮೂರ್ತಿ ಮಾತ್ರ ಗೆಲುವಿನ ನಗೆ ಬೀರಿದ್ದಾರೆ. ಆದರೆ, ಉಳಿದವರನ್ನು ಗರ್ವಭಂಗ ಮಾಡುವಲ್ಲಿ ಗೌಡರು ಯಶಸ್ವಿಯಾಗಿದ್ದಾರೆ ಎನ್ನಬಹುದು.

ಮಂಡ್ಯ ಜಿಲ್ಲೆಯ ನಾಗಮಂಗಲ ಕ್ಷೇತ್ರದ ಚೆಲುವರಾಯಸ್ವಾಮಿ, ಶ್ರೀರಂಗಪಟ್ಟಣ ಕ್ಷೇತ್ರದ ರಮೇಶ್ ಬಂಡಿಸಿದ್ದೇಗೌಡ, ರಾಮನಗರ ಜಿಲ್ಲೆಯ ಮಾಗಡಿ ಕ್ಷೇತ್ರದ ಎಚ್.ಸಿ ಬಾಲಕೃಷ್ಣ, ಕೊಪ್ಪಳ ಜಿಲ್ಲೆಯ ಗಂಗಾವತಿ ಕ್ಷೇತ್ರದ ಇಕ್ಬಾಲ್ ಅನ್ಸಾರಿ ಅವರಿಗೆ ಸೋಲಿನ ರುಚಿ ತೋರಿಸುವಲ್ಲಿ ದೇವೇಗೌಡರು ಮರ್ಮಾಘಾತ ನೀಡಿದ್ದಾರೆ. ತಮ್ಮ ಮೇಲೆ ಎದೆಯುಬ್ಬಿಸಿದವರಿಗೆ ಬರೆ ಹಾಕುವಲ್ಲಿ ದೊಡ್ಡಗೌಡರು ಯಶಸ್ವಿಯಾಗಿದ್ದಾರೆ ಎನ್ನಬಹುದು.

ಜೆಡಿಎಸ್ ತೊರೆದು ಕಾಂಗ್ರೆಸ್ ಪಾಳೆಯದಲ್ಲಿ ಗುರುತಿಸಿಕೊಂಡವರ ಪೈಕಿ ಚಾಮರಾಜಪೇಟೆ ಶಾಸಕ ಜಮೀರ್ ಅಹಮದ್ ಅವರನ್ನು ಸೋಲಿಸಲೇಬೇಕು ಎಂಬುದು ದೇವೇಗೌಡರ ಹಠವಾಗಿತ್ತು. ಇದಕ್ಕಾಗಿಯೇ ತಂತ್ರಗಳನ್ನು ರೂಪಿಸಿದ್ದರು. ಕಾಂಗ್ರೆಸ್‌ನಲ್ಲಿಯೇ ಇದ್ದ ಅಲ್ತಾಫ್‌ಖಾನ್ ಅವರನ್ನು ಜೆಡಿಎಸ್‌ಗೆ ಕರೆತಂದು ಜಮೀರ್ ವಿರುದ್ಧ ಸ್ಪರ್ಧೆಗಿಳಿಸಿದ್ದರು. ಪುಲಿಕೇಶಿ ನಗರದಲ್ಲಿ ಅಖಂಡ ಶ್ರೀನಿವಾಸ್ ಮೂರ್ತಿ ಎದುರಿಗೆ ಕಾಂಗ್ರೆಸ್‌ನಿಂದ ಬಂದ ಪ್ರಸನ್ನಕುಮಾರ್ ಅವರನ್ನು ಕಣಕ್ಕಿಳಿಸಿದ್ದರು. ಆದರೆ, ಇಲ್ಲಿ ಜಮೀರ್ ಮತ್ತು ಅಖಂಡ ಶ್ರೀನಿವಾಸ್ ಗೆಲುವಿಗೆ ಕಡಿವಾಣ ಹಾಕಲು ಜೆಡಿಎಸ್ ವರಿಷ್ಠರಿಗೆ ಸಾಧ್ಯವಾಗಿಲ್ಲ.

ದೇವೇಗೌಡರ ಮೇಲೆ ತೊಡೆತಟ್ಟಿದ್ದ ಮಾಗಡಿಯ ಎಚ್.ಸಿ. ಬಾಲಕೃಷ್ಣ ಅವರಿಗೆ ಮಣ್ಣುಮುಕ್ಕಿಸುವಲ್ಲಿ ದೇವೇಗೌಡರು ಯಶಸ್ವಿಯಾಗಿದ್ದಾರೆ. ನಾಗಮಂಗಲದಲ್ಲಿ ಚೆಲುವರಾಯಸ್ವಾಮಿ ವಿರುದ್ಧ ಸುರೇಶ್ ಗೌಡ ಗೆಲುವು ಕಂಡಿದ್ದಾರೆ. ಶ್ರೀರಂಗಪಟ್ಟಣದಲ್ಲಿ ರಮೇಶ್ ಬಂಡಿಸಿದ್ದೇಗೌಡ ಎದುರಿಗೆ ರವೀಂದ್ರ ಶ್ರೀಕಂಠಯ್ಯ ಗೆಲುವು ಸಾಧಿಸಿದ್ದಾರೆ. ಇನ್ನು ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ಇಕ್ಬಾಲ್ ಅನ್ಸಾರಿ ಬಿಜೆಪಿಯ ಪರಣ್ಣಮುನವಳ್ಳಿ ಗೆಲುವು ಸಾಧಿಸಿದ್ದಾರೆ. ಹೀಗಾಗಿ, ಗೌಡರು ಒಂದು ಹಂತದ ಸೇಡು ತೀರಿಸಿಕೊಂಡಿದ್ದಾರೆ ಎನ್ನಬಹುದು.

# ರಾಜ್ಯಪಾಲರ ಆದ್ಯತೆ ಬಿಜೆಪಿಯೇ...

← ಮೊದಲಪುಟದಿಂದ

ಆಂತರಿಕ ಕಲಹದಲ್ಲೇ ಹಾಲೋಗರು ಉಣ್ಣುತ್ತಿದ್ದ ರಾಜ್ಯ ಮುಖಂಡರಿಂದಾಗಿ ಬಿಜೆಪಿ ಸ್ಥಿತಿ ಕಳವಳಕಾರಿಯಾಗಿತ್ತು. ಚುನಾವಣೆ ಪ್ರಚಾರದ ಅಂತಿಮ ದಿನಗಳಲ್ಲಿ ಮೋದಿ ಅವರೇನಾದರೂ ಬಾರದೇ ಹೋಗಿದ್ದರೆ ಇವತ್ತಿನ ಕಾಂಗ್ರೆಸ್ ಸ್ಥಿತಿಯಲ್ಲಿ ಬಿಜೆಪಿ ಇರುತ್ತಿತ್ತು. ಆದರೆ, ಮೋದಿ ಅವರ ಭಾಷಣಗಳು ಬಿಜೆಪಿಗೆ ಪ್ರಾಣವಾಯುವಾಗಿ 104 ಸ್ಥಾನಗಳು ತಂದುಕೊಟ್ಟಿದೆ. ಆದರೆ, ಅಧಿಕಾರದ ದಡ ಮುಟ್ಟುವಲ್ಲಿ ವಿಫಲವಾಗಿರುವ ಬಗ್ಗೆ ರಾಷ್ಟ್ರೀಯ ನಾಯಕರಿಗೇ ನೋವಾಗಿರುವುದು ಸುಳ್ಳಲ್ಲ. ಆದರೂ ಶತಾಯ–ಗತಾಯ ಅಧಿಕಾರ ಹಿಡಿಯಲು ಬಿಜೆಪಿ ಸಕಲ ವಿದ್ಯೆಗಳನ್ನು ಪ್ರಯೋಗಿಸುವುದರಲ್ಲಿ ಯಾವುದೇ ಅನುಮಾನವಿಲ್ಲ.

ಇನ್ನೊಂದೆಡೆ ಹತ್ತು ವರ್ಷಗಳಿಗೂ ಹೆಚ್ಚು ಕಾಲ ಅಧಿಕಾರ ರಾಜಕೀಯದಿಂದ ದೂರ ಉಳಿದಿದ್ದ ಜೆಡಿಎಸ್‌ಗೆ ಉಳಿದೆರಡು ಪಕ್ಷಗಳಿಗೆ ಆಗಿರುವ ಸ್ಪಷ್ಟ ಬಹುಮತ ನಿರಾಕರಣೆಯೇ ಜೀವಾಳ. ಉತ್ತರ ಕರ್ನಾಟಕದಲ್ಲಿ ಪ್ರಬಲ ಲಿಂಗಾಯತ ಸಮುದಾಯ ಬಿಜೆಪಿ ಕೈ ಹಿಡಿದಂತೆ ಹಳೇ ಮೈಸೂರು ಭಾಗದಲ್ಲಿ ಪ್ರಬಲರಾಗಿರುವ ಒಕ್ಕಲಿಗರು ಜೆಡಿಎಸ್ ಕೈ ಹಿಡಿದಿದ್ದಾರೆ. ತತ್ಪರಿಣಾಮ ಜೆಡಿಎಸ್ ಸರಕಾರ ರಚನೆಯಲ್ಲಿ ನಿರ್ಣಾಯಕ ಪಾತ್ರ ವಹಿಸುವುದಷ್ಟೇ ಅಲ್ಲ ತಾನೇ ಅದರ ಚುಕ್ಕಾಣಿ ಹಿಡಿಯಬಹುದಾದ ಹಂತ ತಲುಪಿದೆ. ಹೀಗಾಗಿಯೇ ಕೊರತೆ ಸ್ಥಾನಗಳನ್ನು ಭರಿಸಲು ರೂಪಿಸಬೇಕಾದ ತಂತ್ರದ ಬಗ್ಗೆ ಬಿಜೆಪಿ ಯೋಚನೆ ಮಾಡುವಷ್ಟರಲ್ಲಿಯೇ ಜೆಡಿಎಸ್ ಜತೆ ಮೈತ್ರಿ ನಿರ್ಣಯವನ್ನು ಕಾಂಗ್ರೆಸ್ ವರಿಷ್ಠರು ತೆಗೆದುಕೊಂಡಿದ್ದಾರೆ. ಹಿಂದೆ ಗೋವಾ ಸರಕಾರ ರಚನೆ ಸಂದರ್ಭದಲ್ಲಿ ಮಾಡಿದ ತಪ್ಪಿಗೆ ಆಸ್ಪದ ಕೊಡದೇ ಮಿಂಚಿನ ವೇಗದಲ್ಲಿ ಕಾರ್ಯಾಚರಣೆ ನಡೆಸಿದ್ದಾರೆ. ಅವತ್ತು ಗೋವಾದಲ್ಲಿ ಕಾಂಗ್ರೆಸ್ ಮಾಡಿದ ತಡ ಬಿಜೆಪಿಗೆ ವರದಾನವಾಗಿ ಪರಿಣಮಿಸಲು ಕಾರಣ ಅಲ್ಲಿದ್ದ ಬಿಜೆಪಿ ಮೂಲದ ರಾಜ್ಯಪಾಲರು. ಇವತ್ತು ಕರ್ನಾಟಕದಲ್ಲಿ ಕಾಂಗ್ರೆಸ್ ಏನೋ ತ್ವರಿತ ತೀರ್ಮಾನ ತೆಗೆದುಕೊಂಡಿದೆ. ಆದರೆ, ಈಗ ಇಲ್ಲಿರುವುದೂ ಅದೇ ಬಿಜೆಪಿ ಮೂಲದ ರಾಜ್ಯಪಾಲರೇ. ಹೀಗಾಗಿ ಸರಕಾರ ರಚನೆ ಅವಕಾಶ ಬಿಜೆಪಿಗೇ ಹೆಚ್ಚು ಎಂದು ಹೇಳಲು ಯಾವುದೇ ಜ್ಯೋತಿಷ್ಯದ ನೆರವು ಬೇಕಿಲ್ಲ!



ತುರುವೇಕೆರೆ ಮಸಾಲೆ ಜಯರಾಮು ಸಂಭ್ರಮಾಚರಣೆ.



ತುಮಕೂರಿನಲ್ಲಿ ಜ್ಯೋತಿಗಣೇಶ್‌ರನ್ನು ಅಭಿಮಾನಿಗಳು ಮೆರವಣಿಗೆ ಮಾಡಿ ಸಂಭ್ರಮಿಸಿದರು.



ವಿಜಯಪುರದ ಜಿಲ್ಲೆಯ ಬಬಲೇಶ್ವರ ಮತಕ್ಷೇತ್ರದ ಅಭ್ಯರ್ಥಿ ಎಂ.ಬಿ.ಪಾಟೀಲ ಅವರ ಗೆಲುವನ್ನು ಅಭಿಮಾನಿಗಳು ಗುಲಾಲ ಹಚ್ಚಿ ಸಂಭ್ರಮಿಸಿದರು.



**ರೋಹಿತ್ ಚಕ್ರತೀರ್ಥ**

ಅಂಕಣಕಾರ

# ಕರಾವಳಿಯಲ್ಲಿ ಮತಗಳ ಧ್ರುವೀಕರಣ

ಹಿಂದೂ ಕಾರ್ಯಕರ್ತರ ಹತ್ಯೆಗಳು ಬಿಜೆಪಿಗೆ ಮತ ತಂದು ಕೊಟ್ಟವೇ ಎಂಬುದರ ಬಗ್ಗೆ ಹೌದು ಅಥವಾ ಇಲ್ಲವೆಂಬ ಸರಳ ಉತ್ತರ ಕೊಡಲಾಗದು. ಚುನಾವಣೆಯಲ್ಲಿ ಗೆಲುವು–ಸೋಲುಗಳನ್ನು ನಿರ್ಧರಿಸುವ ನೂರಾರು ಸಂಗತಿಗಳಿರುತ್ತವೆ. ಅಂಥ ನೂರಾರು ಸಂಗತಿಗಳಲ್ಲಿ ಇದೂ ಒಂದಾಗಿತ್ತು ಎಂದು ಮಾತ್ರ ಹೇಳಬಹುದು. ಹಿಂದೂ ಸಂಘಟನೆಗಳ 24 ಕಾರ್ಯಕರ್ತರು ಕೊಲೆಯಾದರು ಎಂಬ ಕಾರಣವನ್ನಿಟ್ಟುಕೊಂಡೇ ಈ ಸಲ ಸಂಘ ಪರಿವಾರ ಚುನಾವಣೆ ಪ್ರಚಾರದ ಕೆಲಸದಲ್ಲಿ ನೇರವಾಗಿ ತೊಡಗಿಸಿಕೊಂಡಿತ್ತು. ಆದರೆ ಒಟ್ಟು ಮತಗಳಿಕೆಯ ಶೇಕಡಾವಾರು ನೋಡಿದಾಗ ಸಂಘಪರಿವಾರದ ಭರ್ಜರಿ ಪ್ರಚಾರ ಮತದಾನದಲ್ಲಿ ಪ್ರತಿಫಲನಗೊಂಡದ್ದನ್ನು ಕಾಣಲಾಗದು.

ಬಿಜೆಪಿಯ ಸಾಂಪ್ರದಾಯಿಕ ಮತದಾರರು ಬಿಜೆಪಿಗೆ ವೋಟು ಹಾಕಿದ್ದರೆ, ಕಾಂಗ್ರೆಸ್‌ನ ಸಾಂಪ್ರದಾಯಿಕ ಮತದಾರರು ಕೂಡ ತಮ್ಮ ಪಕ್ಷಕ್ಕೆ ಈ ಸಲವೂ ನಿಷ್ಠರಾಗಿ ಉಳಿದಿದ್ದಾರೆ. ಬೆಂಗಳೂರು, ಮೈಸೂರು ಸೇರಿದಂತೆ ಹಲವು ಭಾಗಗಳಲ್ಲಿ ಹಿಂದೂ ಕಾರ್ಯಕರ್ತರ ಹತ್ಯೆಯಾಗಿತ್ತು. ಆದರೆ ಆ ಭಾಗಗಳಲ್ಲೆಲ್ಲ ಬಿಜೆಪಿ ಹೆಚ್ಚಿನ ಮತ ಪಡೆದಿದೆ ಎನ್ನುವಂತಿಲ್ಲ. ಅದರರ್ಥ ಹಿಂದೂ ಕಾರ್ಯಕರ್ತರ ಕೊಲೆಗಳಿಂದಾಗಿ ಹುಟ್ಟಿದ್ದ ಜನಾಕ್ರೋಶ ಮತಗಳಾಗಿ ಪರಿವರ್ತನೆಯಾಗುವಲ್ಲಿ ಸೋತಿದೆ ಎಂದೇ ಅಲ್ಲವೆ? ಆದರೆ, ಒಟ್ಟಾರೆಯಾಗಿ ಹಿಂದೂಗಳ ಮೇಲೆ ಸಿದ್ದರಾಮಯ್ಯನವರ ಸರಕಾರ ದೌರ್ಜನ್ಯ ಎಸಗಿತು. ಅಹಿಂದ ಸರಕಾರ ಅಹಿಂದೂ ಸರಕಾರ ಕೂಡ ಆಗಿತ್ತು ಎಂಬ ಭಾವನೆ ವ್ಯಾಪಕವಾಗಿ ಇದ್ದದ್ದು ಹೌದು. ಕರಾವಳಿ ಹೇಳಿ ಕೇಳಿ ದೇವಸ್ಥಾನಗಳ ಪ್ರಾಂತ್ಯ. ಅಲ್ಲದೆ ಇಲ್ಲಿನ ಭಾಗದ ಜನ ದೈವಭಕ್ತರು. ಹಿಂದೂಗಳ ಭಾವನೆಗಳಿಗೆ ಸಿದ್ದರಾಮಯ್ಯನವರ ಸರಕಾರ ಮೇಲಿಂದ ಮೇಲೆ ಘಾಸಿ ಮಾಡಿದೆ ಎಂಬ ಭಾವ ಈ ಭಾಗದಲ್ಲಿ ದಟ್ಟವಾಗಿದ್ದದ್ದು ನಿಜ. ಧರ್ಮಸ್ಥಳವನ್ನು ಮುಜರಾಯಿಯಡಿ ತರಲು ಚಿಂತನೆ ನಡೆಸಿದ್ದು, ಕದ್ರಿ ದೇವಸ್ಥಾನದಲ್ಲಿ ಧ್ವನಿವರ್ಧಕದ ಬಳಕೆಯನ್ನು ನಿಷೇಧಿಸಿದ್ದು, ಉಡುಪಿಯ ಶ್ರೀಕೃಷ್ಣ ಮಠಕ್ಕೆ ಹೋಗುವುದಿಲ್ಲ ಎಂದು ಸಿದ್ದರಾಮಯ್ಯ ಮೊಂಡುಹಠ ಹೂಡಿದ್ದು, ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಮಡೆಸ್ನಾನದ ವಿಷಯದಲ್ಲಿ ಮೂಗು ತೂರಿಸಿದ್ದು, ಕೊಲ್ಲೂರು ದೇವಸ್ಥಾನದ ಅನುದಾನದಿಂದ ಕಲ್ಲಡ್ಕ ಶಾಲೆಯಲ್ಲಿ ನಡೆಯುತ್ತಿದ್ದ ಬಿಸಿಯೂಟ ನಿಲ್ಲಿಸಿದ್ದು.. ಹೀಗೆ ಹಲವು ವಿಚಾರಗಳು ಕರಾವಳಿ ಭಾಗದಲ್ಲಿ ಮತಗಳು ಧ್ರುವೀಕರಣಗೊಳ್ಳಲು ಕಾರಣವಾದವು.